ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.,
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86,

# ದಿನಾಂಕ:-17-07-2021ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯೆ :ಬಿ12(5)/ಪಿಆರ್/35/2020-21 ದಿನಾಂಕ:21:09:2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್./24/2021-22 ದಿನಾಂಕ:16-07-2021

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ವಿಶ್ವನಾಥ್ | ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2. | ಶ್ರೀ ಬಿ.ಸಿ ರವಿಕುಮಾರ್ | ಸಹಾಯಕ ಅಭಿಯಂತರರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು |
| 3. | ಶ್ರೀಮತಿ. ಗೀತಾ ಕೀನಾಲ್ | ವಾರ್ಡ್ ಸಮಿತಿ ಸದಸ್ಯರು |
| 4. | ಶ್ರೀಮತಿ. ಮಂಜುಳಾ | ವಾರ್ಡ್ ಸಮಿತಿ ಸದಸ್ಯರು |
| 5. | ಶ್ರೀ ಉದಯ ಶಂಕರ್ | 1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ |
| 6. | ಶ್ರೀ ಗಂಗಹನುಮಯ್ಯ | ವಾರ್ಡ್ ಸಮಿತಿ ಸದಸ್ಯರು. |
| 7. | ಶ್ರೀ. ಛಾಯಾಪತಿ | ಕಿರಿಯ ಆರೋಗ್ಯ ಪರೀವಿಕ್ಷಕರು. ವಾರ್ಡ್-67(ಪ್ರಭಾರ) |
| 8. | ಶ್ರೀ. ಎಚ್ ಎಮ್ ಗಂಗಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-67 |
| 9. | ಶ್ರೀ. ರಾಜ್‌ಗೋಪಾಲ್ | ಕಂದಾಯ ಪರೀವಿಕ್ಷಕರು-ವಾರ್ಡ್- 67 |
| 10. | ಶ್ರೀ. ಸತೀಶ್ | ಬೀದಿ ದೀಪ ಗುತ್ತಿಗೆದಾರರ ಸಿಬ್ಬಂದಿ. |
| 11. | ಶ್ರೀ. ನಾಗರಾಜು | ಸಹಾಯಕ ಅಭಿಯಂತರರು ಬೆಂ.ಜ.ಮಂ |
| 12. | ಶ್ರೀ. ಪ್ರವೀಣ್ ಬಿ ಪಾಟೀಲ್ | ಸಂಚಾರಿ ಪೋಲಿಸ್ ಕಾನ್ಸಟೆಬಲ್, ರಾಜಾಜಿನಗರ ಪೋಲೀಸ್ ಠಾಣೆ |
| 13. | ಶ್ರೀ ಗೋಪಾಲ್ ಕೃಷ್ಣ | ಸಂಚಾರಿ ಪೋಲಿಸ್ ಕಾನ್ಸಟೆಬಲ್, ರಾಜಾಜಿನಗರ ಪೋಲೀಸ್ ಠಾಣೆ |
| 14. | ಶ್ರೀ. ರಾಜೇಶ್ | ವಾರ್ಡ್ ಮಾರ್ಷಲ್ -67 |
| 15. | ಶ್ರೀ. ಕೃಷ್ಣಪ್ಪ | ಸಹಾಯಕ ಪೋಲಿಸ್ ಇನ್ಸಪೆಕ್ಟರ್ ಮಹಾಲಕ್ಷ್ಮೀಪುರಂ ಪೋಲಿಸ್ ಠಾಣೆ |



ಪು.ತಿ.ನೋ.

Scanned by CamScanner

| | | |
|---|---|---|
| 16. | ಶ್ರೀ. ಶಿವಕುಮಾರ್ | ಸಹಾಯಕ ಪೋಲಿಸ್ ಇನ್ಸಪೆಕ್ಟರ್ ಮಹಾಲಕ್ಷ್ಮೀಪುರಂ ಪೋಲಿಸ್ ಠಾಣೆ |
| 17. | ಶ್ರೀ. ಗಂಗಚೆಲುವಯ್ಯ | ಬೆಂ.ಜ.ಮಂ |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಜೂಲೈ ಮಾಹೆಯ ಮೂರನೇ ಶನಿವಾರ ದಿ:17/07/2021ರಂದು ಬೆಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

| | |
|---|---|
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ಕಳೆದ ಸಭೆಯಲ್ಲಿ ಕೇತಮಾರನಹಳ್ಳಿ ಸುತ್ತ ಮುತ್ತ ಪ್ರದೇಶಗಳಲ್ಲಿ ನೀರಿನ ಅಭಾವದ ಕುರಿತು ದೂರುಗಳು ಕಂಡುಬಂದಿರುತ್ತದೆ ಇದರ ಬಗ್ಗೆ ವಾರ್ಡ್ ಸಮಿತಿ ಸದಸ್ಯರನ್ನು ನೀರಿನ ಅಭಾವದ ಬಗ್ಗೆ ವಿಚಾರಿಸಿದರು. |
| ಶ್ರೀಮತಿ. ಮಂಜುಳಾ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ಕೇತಮಾರನಹಳ್ಳಿ ಸುತ್ತ ಮುತ್ತ ಪ್ರದೇಶಗಳಲ್ಲಿ ನೀರಿನ ಅಭಾವ ಇತ್ತಿಚಿನ ದಿನಗಳಲ್ಲಿ ನಿಯಂತ್ರಣದಲ್ಲಿರುವುದಾಗಿ ಸಭೆಗೆ ಮಾಹಿತಿ ಒದಗಿಸಿದರು. |
| ಶ್ರೀಮತಿ. ಮಂಜುಳಾ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ಕೇತಮಾರನಹಳ್ಳಿ ಎಸ್.ಬಿ.ಐ ಬ್ಯಾಂಕ್ ಎದುರು ಬೀದಿ ದೀಪ ಉರಿಯುತ್ತಿರುವುದಿಲ್ಲ ಅದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವೆಂಕಟೇಶ್ ಮೂರ್ತಿ ವಾರ್ಡ್‌ನ ನಾಗರಿಕರು | ವಾರ್ಡ್‌ನ ರಾಜಾಜಿನಗರ ಮೆಟ್ರೋ ನಿಲ್ದಾಣದ ಹತ್ತಿರ ಹಾಗು 1ನೇ ಮೈನ್‌ನಲ್ಲಿ ಬೀದಿ ದೀಪ ಉರಿಯುತ್ತಿರುವುದಿಲ್ಲ ಅದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಸತೀಶ್ ಬೀದಿ ದೀಪ ಗುತ್ತಿಗೆದಾರರ ಸಿಬ್ಬಂದಿ. | ವಾರ್ಡ್‌ನ ಸದಸ್ಯರ ದೂರಿನ ಕೂರಿತು ಕ್ರಮವಹಿಸಲಾಗುವುದಾಗಿ ಸಭೆಗೆ ಬರವಸೆ ನೀಡಿದರು |
| ಶ್ರೀಮತಿ. ಮಂಜುಳಾ ಹಾಗು ಗೀತಾ ಕೀನಾಲ್ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ರಾಜಾಜಿನಗರ 'ಕೆ' ಬ್ಲಾಕ್‌ನಲ್ಲಿ ರಸ್ತೆಯಲ್ಲಿ ಹಾಗು ಪಾದಚಾರಿ ಮಾರ್ಗ ಅಡ್ಡಲಾಗಿ ವಾಹನ ನಿಲುಗಡೆ ಮಾಡಿರುತ್ತಾರೆ ಇದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುತ್ತದೆ. |
| ಶ್ರೀಮತಿ. ಗೀತಾ ಕೀನಾಲ್ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ರಾಜಾಜಿನಗರ 'ಕೆ' ಬ್ಲಾಕ್‌ನಲ್ಲಿ ರಸ್ತೆಗಳಲ್ಲಿ ಗುಂಡಿಗಳು ಕಂಡುಬಂದಿರುತ್ತವೆ ವಾಹನ ಸವಾರಾರಿಗೆ ತೊಂದರೆ ಉಂಟಾಗುತ್ತಿರುತ್ತದೆ. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್-67 | ವಾರ್ಡ್‌ನ ಸಹಾಯಕ ಅಭಿಯಂತರರು ಮಾತನಾಡುತ್ತ ವಾರ್ಡ್ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಕ್ರಮವಹಿಸುವುದಾಗಿ ಸಭೆಗೆ ಭರವಸೆ ನೀಡಿದರು. |

ಮ.ಕಿ.ನೋ.

Scanned by CamScanner

| | |
|---|---|
| ಶ್ರೀಮತಿ. ಗೀತಾ ಕೀನಾಲ್ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ 19ನೇ 'ಡಿ' ಮೈನ್‌ನಲ್ಲಿ ಮರದ ಕೊಂಬೆಯನ್ನು ಟ್ರಿಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್–67 | ವಾರ್ಡ್‌ನ 11ನೇ ಕ್ರಾಸ್‌ನಲ್ಲಿ ಮರದ ಕೊಂಬೆಯನ್ನು ಟ್ರಿಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಮಲ್ಲಯ್ಯ ಅರಣ್ಯ ಇಲಾಖೆ ಸಿಬ್ಬಂದಿ | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಕ್ರಮವಹಿಸುವುದಾಗಿ ಸಭೆಗೆ ಭರವಸೆ ನೀಡಿದರು. |
| ಶ್ರೀ ಉದಯ ಶಂಕರ್ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 'ಆರ್' ಬ್ಲಾಕ್‌ನಲ್ಲಿ ಸಿ.ಸಿ ಕ್ಯಾಮೇರಾ ಚಾಲ್ತಿಯಲ್ಲಿರುವುದಿಲ್ಲ ಇದರಿಂದ ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚಲು ತೊಂದರೆ ಉಂಟಾಗುತ್ತದೆ. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್–67 | ವಾರ್ಡ್‌ನ 'ಆರ್' ಬ್ಲಾಕ್‌ನ' ಸಿ.ಸಿ ಕ್ಯಾಮೇರಾ ಕಾಮಗಾರಿ ಕಡತವು ಟೆಂಡರ್ ಪ್ರಕೀಯೆಯಲ್ಲಿರುತ್ತದೆ ಕೆಲಸದ ಆದೇಶ ದೊರೆತ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. |
| ಶ್ರೀಮತಿ. ಗೀತಾ ಕೀನಾಲ್ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ರಾಜಾಜಿನಗರ 'ಕೆ' ಬ್ಲಾಕ್‌ನಲ್ಲಿ ರಸ್ತೆಗಳಲ್ಲಿ ಹಾಗು ಮನೆಗಳ ಮುಂಭಾಗದಲ್ಲಿ ಕೇಬಲ್‌ಗಳು ತುಂಡಾಗಿ ಬಿದ್ದಿರುತ್ತವೆ ಇದರಿಂದ ವಾಹನ ಅಪಘಾತವಾಗುವ ಸಂಭವವಿರುತ್ತದೆ. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್–67 | ವಾರ್ಡ್‌ನ ರಾಜಾಜಿನಗರ 'ಕೆ' ಬ್ಲಾಕ್‌ನಲ್ಲಿನ ದೂರಿಗೆ ಸಂಭಂದಿಸಿದಂತೆ ಕ್ರಮವಹಿಸುವುದಾಗಿ ಸಭೆಗೆ ಭರವಸೆ ನೀಡಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಕೇತ್‌ಮಾರನಹಳ್ಳಿ ಉದಯ ಕುಮಾರ್ ಉದ್ಯಾನವನದ ಹತ್ತಿರ ಮರದಲ್ಲಿ ಬಿಟ್ಟಿರುವ ಕಾಯಿಗಳನ್ನು ಕಿತ್ತುಹಾಕಬೇಕು ಇಲ್ಲವಾದಲ್ಲಿ ಕಾರುಗಳ ಮೇಲೆ ಹಾಗು ಪಾದಚಾರಿಗಳ ಮೇಲೆ ಬಿದ್ದು ಸಮಸ್ಯೆ ಉಂಟಾಗುತ್ತದೆ |
| ಶ್ರೀ ಮಲ್ಲಯ್ಯ ಅರಣ್ಯ ಇಲಾಖೆ ಸಿಬ್ಬಂದಿ | ವಾರ್ಡ್‌ನ ಸಮಿತಿ ಅದ್ಯಕ್ಷರ ದೂರಿಗೆ ಸಂಭಂದಿಸಿದಂತೆ ಕ್ರಮವಹಿಸುವುದಾಗಿ ಸಭೆಗೆ ಭರವಸೆ ನೀಡಿದರು. |
| ಶ್ರೀ ಗೋಪಾಲ್ ಕೃಷ್ಣ ಸಂಚಾರಿ ಪೋಲಿಸ್ ಕಾನ್ಸಟೆಬಲ್ | ವಾರ್ಡ್‌ನ ಮಹಾಲಕ್ಷ್ಮೀಪುರಂ ಸಿಗ್ನಲ್ ಹತ್ತಿರ ಮರದ ಬುಡ್ಡೆ ತೆರವುಗೊಳಿಸಬೇಕು ಪಾದಚಾರಿಗಳಿಗೆ ಸಮಸ್ಯೆ ಉಂಟಾಗಿರುತ್ತದೆ. |
| ಶ್ರೀ ಮಲ್ಲಯ್ಯ ಅರಣ್ಯ ಇಲಾಖೆ ಸಿಬ್ಬಂದಿ | ವಾರ್ಡ್‌ನ ಮಹಾಲಕ್ಷ್ಮೀಪುರಂ ಸಿಗ್ನಲ್ ಹತ್ತಿರ ಮರದ ಬುಡ್ಡೆ ತೆರವುಗೊಳಿಸಲು ಸ್ಥಳ ಪರೀಶಿಲಿಸಿ ಬುಡ್ಡೆಯನ್ನು ತೆರವುಗೊಳಿಸಲಾಗುವುದೆಂದು ಮಾಹಿತಿ ಒದಗಿಸಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ತೆರಿಗೆ ಸಂಗ್ರಹಣೆ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಟ್ಯಾಕ್ಸ್ ಇನ್ಸಪೆಕ್ಟರ್ ರವರನ್ನು ವಿಚಾರಿಸಿದರು. |

ವಿಶ್ವನಾಥ್. ಎಸ್

ಪು.ತಿ.ನೋ.



Scanned by CamScanner

| | |
|---|---|
| ಶ್ರೀ. ರಾಜ್‌ಗೋಪಾಲ್ ಕಂದಾಯ ಪರೀವಿಕ್ಷಕರು- ವಾರ್ಡ್- 67 | ವಾರ್ಡ್‌ನಲ್ಲಿ ಸರಿಯಾದ ರೀತಿಯಲ್ಲಿ ತೆರಿಗೆ ಪಾವತಿಯಾಗುತ್ತಿದ್ದು ತೆರಿಗೆ ಪಾವತಿಸದ ಕೆಲವು ಕಟ್ಟಡಗಳಿಗೆ ನೋಟಿಸ್ ನೀಡಿರುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ ಉದಯ ಶಂಕರ್ ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 20ನೇ 'ಎ' ಮೈನ್‌ನಲ್ಲಿ ಡೆಬ್ರೀಸ್ ತೆರವುಗೊಳಿಸಬೇಕು ಎಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್-67 | ವಾರ್ಡ್‌ನ ರಾಜಾಜಿನಗರ 20ನೇ 'ಎ' ಮೈನ್‌ನಲ್ಲಿ ಡೆಬ್ರೀಸ್ ತೆರವುಗೊಳಿಸಲಾಗುವುದೆಂದು ಸಭೆಗೆ ಭರವಸೆ ನೀಡಿದರು. |
| ಶ್ರೀ. ವೆಂಕಟೇಶ್ ಮೂರ್ತಿ ವಾರ್ಡ್‌ನ ನಾಗರಿಕರು | ವಾರ್ಡ್‌ನ ಸಿದ್ದಾರೂಡ ಪಾರ್ಕ್‌ನಲ್ಲಿ ದೀಪಗಳು ತಡವಾಗಿ ಸ್ವಿಚ್ ಆನ್ ಮಾಡಲಾಗುತ್ತಿದೆ. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್-67 | ಉದ್ಯಾನ ಅಧೀಕ್ಷಕರು(ಪಶ್ಚಿಮ ವಲಯ)ರವರಿಗೆ ತಿಳಿಸಿ, ಅಗತ್ಯ ಕ್ರಮ ಕೈಗೊಳ್ಳಲು ತಿಳಿಸುವುದಾಗಿ ಸಭೆಗೆ ತಿಳಿಸಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಕೋವಿಡ್-19 ಪ್ರಕರಣಗಳ ಕುರಿತು ಮಾಹಿತಿ ಕೊಡಲು ಹಿರಿಯ ಆರೋಗ್ಯ ಪರೀವಿಕ್ಷಕರಿಗೆ ತಿಳಿಸಿದರು. |
| ಶ್ರೀ. ಎಚ್ ಎಮ್ ಗಂಗಯ್ಯ ಹಿರಿಯ ಆರೋಗ್ಯ ಪರಿವೀಕ್ಷಕರು, | ವಾರ್ಡ್‌ನಲ್ಲಿ ಕೋವಿಡ್-19 ಪ್ರಕರಣಗಳು ಕೆಲವು ದಿನಗಳಿಂದ ಕಡಿಮೆ ದಾಖಲಾಗುತ್ತಿದೆ ಹಾಗು ಪ್ರತಿನಿತ್ಯಾ 18ವರ್ಷ ಮೇಲ್ಪಟ ಸಾರ್ವಜನಿಕರಿಗೆ ಲಸಿಕೆ ನೀಡುತ್ತಿರುವುದು ಚಾಲ್ತಿಯಲ್ಲಿರುತ್ತದೆ ಎಂದು ಸಭೆಗೆ ಮಾಹಿತಿ ಒದಗಿಸಿದರು. . |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಣ್ಣ ವ್ಯಾಪಾರಿಗಳು ಹಚ್ಚಾಗಿ ಪ್ಲಾಸ್ಟಿಕ್ ಕವರ್ ಬಳಕೆ ಮಾಡುತ್ತಿರುವುದು ಕಂಡುಬಂದಿರುತ್ತದೆ ಅದರ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗು ಮಾರ್ಷಲ್‌ಗಳು ಸೂಕ್ತ ಕ್ರಮ ತೆಗೆದುಕೊಳಲು ತಿಳಿಸಿದರು. |
| ಶ್ರೀ. ಎಚ್ ಎಮ್ ಗಂಗಯ್ಯ ಹಿರಿಯ ಆರೋಗ್ಯ ಪರಿವೀಕ್ಷಕರು, | ವಾರ್ಡ್‌ನ ಅಧ್ಯಕ್ಷರ ದೂರಿಗೆ ಸಂಭಂದಿಸಿದಂತೆ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವ ವ್ಯಾಪಾರಿಗಳ ಅಂಗಡಿಗಳ ಮೇಲೆ ರೈಡ್ ಮಾಡಿ ದಂಡ ಹಾಕಲಾಗುವುದು ಹಾಗು ಪ್ಲಾಸ್ಟಿಕ್ ಸೀಸ್ ಮಾಡಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |

<u>ಪ್ರತಿಯನ್ನು</u>

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.

ವಿಶ್ವನಾಥ್.ಎ

ಪು.ತಿ.ನೋ.



Scanned by CamScanner

10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner